# ತರಗತಿಯೊಳಗಿನ ಚಟುವಟಿಕೆ - ‘ನಿಮ್ಮ ಸ್ಥಳೀಯ ಆಡಳಿತವನ್ನು ತಿಳಿದುಕೊಳ್ಳಿ’

## ಪರಿವಿಡಿ


ತರಗತಿಯೊಳಗಿನ ಚಟುವಟಿಕೆ – ‘ನಿಮ್ಮ ಸ್ಥಳೀಯ ಆಡಳಿತವನ್ನು ತಿಳಿದುಕೊಳ್ಳಿ’ 1

ಶಿಕ್ಷಕರ ವಿಭಾಗ 1

ಪರಿಚಯ 1

ಉದ್ದೇಶಗಳು 2

ಫಲಿತಾಂಶಗಳು 2

ಕೌಶಲ್ಯ ಮತ್ತು ಮೌಲ್ಯಗಳು 2

ತರಗತಿಗಳ ಅವಲೋಕನ 2

ಬೇಕಾದ ಸಾಮಗ್ರಿಗಳು 3

ಚಟುವಟಿಕೆಯ ಹಂತಗಳು 3

ಹಂತ 1 - ಪರಿಚಯ 3

ಹಂತ 2 – ಗುಂಪು ಚಟುವಟಿಕೆ 4

ಹಂತ 3 – ಗುಂಪು ಪ್ರಸ್ತುತಿ 4

ಹಂತ 4 – ವಿವರಣೆ 5

ಪ್ರತಿಕ್ರಿಯೆ ಫಾರ್ಮ್ (ಶಿಕ್ಷಕರು ಭರ್ತಿ ಮಾಡಬೇಕು) 6

ರಿಫ್ಲೆಕ್ಷನ್ ಶೀಟ್ (ವಿದ್ಯಾರ್ಥಿಗಳು ಭರ್ತಿ ಮಾಡಬೇಕು) 7

ಪ್ರಿಂಟ್ ವಿಭಾಗ - 9

ಅನುಬಂಧ 1 – ಸಮಸ್ಯೆ ಕಾರ್ಡ್‌ಗಳು 9

ಅನುಬಂಧ 2 – ಪರಾಮರ್ಶನಾ ಕರಪತ್ರ 9


## ಶಿಕ್ಷಕರ ವಿಭಾಗ

### ಪರಿಚಯ

ಸ್ಥಳೀಯ ಆಡಳಿತವು ಜನರಿಗೆ ಹತ್ತಿರವಾದ ಆಡಳಿತವಾಗಿದೆ. ತಮ್ಮ ಸಮಸ್ಯೆಗಳನ್ನು ತ್ವರಿತವಾಗಿ ಮತ್ತು ಕನಿಷ್ಠ ವೆಚ್ಚದಲ್ಲಿ ಪರಿಹರಿಸಿಕೊಳ್ಳಲು ಸ್ಥಳೀಯ ಆಡಳಿತವನ್ನು ಸಂಪರ್ಕಿಸುವುದು ಜನರಿಗೆ ಅನುಕೂಲಕರ. ಆದರೆ ಯಾವ ಅಧಿಕಾರಿಯನ್ನು ಸಂಪರ್ಕಿಸಬೇಕು, ಅವರು ಹೇಗೆ ಕಾರ್ಯನಿರ್ವಹಿಸುತ್ತಾರೆ, ಪಂಚಾಯತ್/ನಗರಸಭೆ ಎಲ್ಲಿದೆ ಎಂಬುದು ನಮಗೆ ತಿಳಿದಿದೆಯೇ? ನಮ್ಮ ಸ್ಥಳೀಯ ಆಡಳಿತ ಮತ್ತು ನಮ್ಮ ಪ್ರದೇಶದಲ್ಲಿ ಅವುಗಳ ಕಾರ್ಯಚರಣೆಯ ಕುರಿತು ನಮ್ಮ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳೋಣ.

Gram Panchayat



Muncipality



ಸ್ಥಳೀಯ ಆಡಳಿತವು ಹಳ್ಳಿಗಳು, ಪಟ್ಟಣಗಳು ಅಥವಾ ನಗರ ಪ್ರದೇಶಗಳಂತಹ ಸಣ್ಣ ಸಮುದಾಯದ ಆಡಳಿತವನ್ನು ನೋಡಿಕೊಳ್ಳುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಸ್ಥಳೀಯ ಯೋಜನೆ, ಅಭಿವೃದ್ಧಿ ಮತ್ತು ಆಡಳಿತದ ಉದ್ದೇಶಕ್ಕಾಗಿ ರಚಿಸಲಾದ ಸ್ಥಳೀಯ ಸಂಸ್ಥೆಗಳನ್ನು ಪಂಚಾಯತ್ ಎಂದು ಕರೆದರೆ ನಗರ ಪ್ರದೇಶಗಳಲ್ಲಿ ಸ್ಥಳೀಯ ಯೋಜನೆ, ಅಭಿವೃದ್ಧಿ ಮತ್ತು ಆಡಳಿತದ ಉದ್ದೇಶಕ್ಕಾಗಿ ರಚಿಸಲಾದ ಸ್ಥಳೀಯ ಸಂಸ್ಥೆಗಳನ್ನು ನಗರಸಭೆ ಎಂದು ಕರೆಯಲಾಗುತ್ತದೆ. ಈ ಚಟುವಟಿಕೆಯ ಮೂಲಕ ನಮ್ಮ ಸ್ಥಳೀಯ ನಿರ್ದಿಷ್ಟ ಸಮಸ್ಯೆಯೊಂದಿಗೆ ನಮ್ಮ ಸ್ಥಳೀಯ ಆಡಳಿತದ ವ್ಯವಸ್ಥೆಯನ್ನು ನಾವು ಅರ್ಥ ಮಾಡಿಕೊಳ್ಳೋಣ.

## ಉದ್ದೇಶಗಳು

1. ಸ್ಥಳೀಯ ಆಡಳಿತ ರಚನೆಯನ್ನು ಗುರುತಿಸಲು ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತದೆ.
2. ಸ್ಥಳೀಯ ಸಮಸ್ಯೆಗಳು ಎದುರಾದ ಸಂದರ್ಭದಲ್ಲಿ ಸರ್ಕಾರದ ರಚನೆ ಮತ್ತು ಪಾತ್ರವನ್ನು ಗುರುತಿಸಲು ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತದೆ.

## ಫಲಿತಾಂಶಗಳು

1. ತಮ್ಮ ಸ್ವಂತ ಅಭಿಪ್ರಾಯದಲ್ಲಿ ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸುವ ಸ್ಥಳೀಯ ಆಡಳಿತದ ರಚನೆ ಹಾಗೂ ಪಾತ್ರವನ್ನು ವಿವರಿಸಲು ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತದೆ.

## ಕೌಶಲ್ಯಗಳು ಮತ್ತು ಮೌಲ್ಯಗಳು

ಕೌಶಲ್ಯಗಳು - ಸಂವಹನ, ಸಹಯೋಗ ಮತ್ತು ಸೃಜನಶೀಲತೆ, ಸಮಸ್ಯೆ ಪರಿಹಾರ

ಮೌಲ್ಯಗಳು – ಜವಾಬ್ದಾರಿ, ಕಾಳಜಿ

**ತರಗತಿಗಳ ಅವಲೋಕನ**

| ಕ್ರ. ಸಂ | ತರಗತಿಯ ವಿವರಗಳು | ಬೇಕಾದ ಅಂದಾಜು ಸಮಯ |
|---|---|---|
| 1 | ಹಂತ 1: ಪರಿಚಯ<br>ಹಂತ 2: ಗುಂಪು ಚಟುವಟಿಕೆ | 45 ನಿಮಿಷಗಳು |
| 2 | ಹಂತ 3: ಗುಂಪು ಪ್ರಸ್ತುತಿ<br>ಹಂತ 4: ಚಟುವಟಿಕೆಯ ವಿವರಣೆ | 45 ನಿಮಿಷಗಳು |

## ಬೇಕಾದ ಸಾಮಗ್ರಿಗಳು

ನೋಟ್‌ಬುಕ್ ಗಳು, ಪೆನ್ನುಗಳು

## ಚಟುವಟಿಕೆಯ ಹಂತಗಳು

ತರಗತಿ 1: 45 ನಿಮಿಷಗಳ ತರಗತಿಯ ಹಂತ 1-2

**ಹಂತ 1** - **ಪರಿಚಯ**

ಸಮಯ: 10-12 ನಿಮಿಷಗಳು

ನಮ್ಮ ಸ್ಥಳೀಯ ಆಡಳಿತಕ್ಕೆ ಯಾವ ಸಮಸ್ಯೆಗಳು/ದೂರುಗಳು ಸಂಬಂಧಿಸಿರಬಹುದು ಎಂಬುದನ್ನು ನೀಡಿದ ಸುಳಿವುಗಳನ್ನು ಬಳಸಿಕೊಂಡು ಗುರುತಿಸುವಂತೆ ವಿದ್ಯಾರ್ಥಿಗಳಿಗೆ ಹೇಳಿ.

**ಸುಳಿವುಗಳನ್ನು ಒಂದೊಂದಾಗಿ ಓದಿ (ಕೆಳಗೆ ಪಟ್ಟಿ ಮಾಡಲಾದ ಪಟ್ಟಿಯಿಂದ ಯಾವುದೇ 4-5 ಸುಳಿವುಗಳನ್ನು ಶಿಕ್ಷಕರು ಓದಬಹುದು) ಮತ್ತು ಪ್ರಶ್ನೆಗಳಿಗೆ ಉತ್ತರಿಸಲು ಕೈ ಎತ್ತುವಂತೆ ವಿದ್ಯಾರ್ಥಿಗಳಿಗೆ ಹೇಳಿ.**

1. ಗ್ರಾಮ ಅಥವಾ ನಗರದೊಳಗಿನ ರಸ್ತೆಗಳ ದುರಸ್ತಿ
2. ಹುಟ್ಟುಹಬ್ಬದ ಪಾರ್ಟಿಯ ಯೋಜನೆ
3. ಜನನ ಪ್ರಮಾಣಪತ್ರ ನೀಡಿಕೆ
4. ಖಾಸಗಿ ಆಸ್ಪತ್ರೆ ಪ್ರಾರಂಭಿಸುವುದು
5. ಪಾದಚಾರಿ ಮಾರ್ಗಗಳ ನಿರ್ಮಾಣ
6. ಖಾಸಗಿ ಕೆಫೆಗಳನ್ನು ತೆರೆಯುವುದು
7. ಬೀದಿ ದೀಪಗಳನ್ನು ಅಳವಡಿಸುವುದು
8. ಕಸ ಸಂಗ್ರಹಣೆ

(2, 4 ಮತ್ತು 6 ಸ್ಥಳೀಯ ಆಡಳಿತದ ಪಾತ್ರವಲ್ಲ)

ನಾವು ಎಸೆಯುವ ಕಸಗಳನ್ನು ಸ್ವಚ್ಛಗೊಳಿಸುವುದು, ಮನೆ ತೆರಿಗೆ ಸಂಗ್ರಹಿಸುವುದು, ಬೀದಿದೀಪಗಳನ್ನು ನಿರ್ವಹಿಸುವುದು ಇತ್ಯಾದಿ ಅನೇಕ ಪಾತ್ರಗಳನ್ನು ನಿರ್ವಹಿಸಲು ಪ್ರತಿ ಗ್ರಾಮ ಮತ್ತು ನಗರದಲ್ಲಿ ಸ್ಥಳೀಯ ಆಡಳಿತವಿರಬೇಕು ಎಂದು ಶಿಕ್ಷಕರು ವಿದ್ಯಾರ್ಥಿಗಳಿಗೆ ಹೇಳಬಹುದು.

ಸ್ಥಳೀಯ ಆಡಳಿತದ ಕೆಲವು ಅನುಕೂಲಗಳು:

1. ನಾಗರಿಕರು ಸುಲಭವಾಗಿ ಸಂಪರ್ಕಿಸಬಹುದು. ಮತ್ತು ಅವರು ನೇರವಾಗಿ ಸ್ಥಳೀಯ ಆಡಳಿತಕ್ಕೆ ಹೋಗಿ ಸಮಸ್ಯೆಗಳನ್ನು ಹೇಳಬಹುದು.
2. ಅವರು ಸಹ ಅದೇ ಪ್ರದೇಶಕ್ಕೆ ಸೇರಿದವರೇ ಆಗಿರುವುದರಿಂದ ಜನರ ಅಗತ್ಯಗಳನ್ನು ಪೂರೈಸಲು ಸ್ಥಳೀಯ ಜ್ಞಾನ ಮತ್ತು ತರಬೇತಿಯನ್ನು ಹೊಂದಿರುತ್ತಾರೆ

, ಇಂದಿನ ಚಟುವಟಿಕೆಯ ತರಗತಿಯಲ್ಲಿ ನೀರಿನ ಕೊರತೆಯ ಸಂದರ್ಭದಲ್ಲಿ ಸ್ಥಳೀಯ ಆಡಳಿತದ ಕಾರ್ಯಗಳ ಕುರಿತು ನಾವು ಇನ್ನಷ್ಟು ತಿಳಿದುಕೊಳ್ಳಲಿದ್ದೇವೆ ಎಂದು ಶಿಕ್ಷಕರು ವಿದ್ಯಾರ್ಥಿಗಳಿಗೆ ತಿಳಿಸುತ್ತಾರೆ.

**ಹಂತ 2: ಗುಂಪು ಚಟುವಟಿಕೆ**

ಸಮಯ: 30 ನಿಮಿಷ

1. ತರಗತಿಯನ್ನು 4 ಗುಂಪುಗಳಾಗಿ ವಿಂಗಡಿಸಿ. ಎರಡು ಗುಂಪುಗಳು ಗ್ರಾಮೀಣ ಪ್ರದೇಶ ಮತ್ತು ಎರಡು ಗುಂಪುಗಳು ನಗರ ಪ್ರದೇಶಗಳ ಸ್ಥಳೀಯ ಆಡಳಿತ ವ್ಯವಸ್ಥೆಯಾಗಿ ಕೆಲಸ ಮಾಡುತ್ತವೆ. ಶಿಕ್ಷಕರು ಪ್ರತಿ ಉಪಗುಂಪಿಗೆ 2-2 ಪ್ರಶ್ನೆಗಳನ್ನು ವಿಂಗಡಿಸಬಹುದು.
2. ಇಂದು ನಾವು 'ನೀರಿನ ಕೊರತೆ' ಸಮಸ್ಯೆಯ ಮೇಲೆ ಕೆಲಸ ಮಾಡುತ್ತೇವೆ ಎಂಬುದನ್ನು ವಿದ್ಯಾರ್ಥಿಗಳಿಗೆ ತಿಳಿಸಿ. ಅನುಬಂಧ 1 ರಲ್ಲಿ ನೀಡಲಾದ ಸಮಸ್ಯೆ ಕಾರ್ಡ್ ಅನ್ನು ಓದಿ.
3. ಅನುಬಂಧ 2 ರಲ್ಲಿ ನೀಡಲಾದ ಕರಪತ್ರದ ಸಹಾಯದಿಂದ ಈ ಸಮಸ್ಯೆಯ ಸಂದರ್ಭದಲ್ಲಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವ ಕಾರ್ಯವನ್ನು ಗುಂಪುಗಳಿಗೆ ನಿಯೋಜಿಸಿ.(ಶಿಕ್ಷಕರು, ವಿದ್ಯಾರ್ಥಿಗಳ ಸಹಾಯದೊಂದಿಗೆ ಕೈಬರಹದ ಕರಪತ್ರವನ್ನು ರಚಿಸಬಹುದು ಅಥವಾ ಪ್ರಿಂಟ್ ತೆಗೆಯಬಹುದು)
   1. ಸ್ಥಳೀಯ ಆಡಳಿತವು ಈ ಸಮಸ್ಯೆಯನ್ನು ಪರಿಹರಿಸಬೇಕೆಂದು ನೀವೇಕೆ ಯೋಚಿಸುತ್ತೀರಿ?
   2. ನೀರಿನ ಸಮಸ್ಯ ಈ ಸಮಸ್ಯೆಯನ್ನು ಪರಿಹರಿಸಲು ಸ್ಥಳೀಯ ಆಡಳಿತ ಏನು ಮಾಡಬಹುದು?
   3. ಯಾವ ಇಲಾಖೆ/ವ್ಯಕ್ತಿಯು ಈ ಸಮಸ್ಯೆಯನ್ನು ಪರಿಹರಿಸುತ್ತಾರೆಂದು ನೀವು ಯೋಚಿಸುತ್ತೀರಿ?
   4. ನೀವು ಅವರನ್ನು ಹೇಗೆ ಸಂಪರ್ಕಿಸಬಹುದು, ಅವರನ್ನು ಸಂಪರ್ಕಿಸುವ ವಿಧಾನಗಳು ಮತ್ತು ಲಭ್ಯವಿರುವ ಆಯ್ಕೆಗಳು ಯಾವುವು?
4. ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಲು 20 ನಿಮಿಷಗಳ ಕಾಲಾವಕಾಶವಿದೆ ಎಂದು ವಿದ್ಯಾರ್ಥಿಗಳಿಗೆ ಹೇಳಿ.

**ಹೋಮ್‌ವರ್ಕ್:**

ಸ್ಥಳೀಯ ಸರ್ಕಾರಿ ಕಚೇರಿಗೆ ಭೇಟಿ ನೀಡುವ ಮೂಲಕ ಅಥವಾ ನಿಮ್ಮ ಪೋಷಕರೊಂದಿಗೆ ಚರ್ಚಿಸುವ ಮೂಲಕ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಲು ಮತ್ತಷ್ಟು ಸಂಶೋಧನೆ ಮಾಡಲು ವಿದ್ಯಾರ್ಥಿಗಳಿಗೆ ಹೇಳಿ ಮತ್ತು ತಾವು ಪಡೆದ ಉತ್ತರಗಳನ್ನು ಮುಂದಿನ ತರಗತಿಯಲ್ಲಿ ಅದೇ ಗುಂಪುಗಳಾಗಿ ಪ್ರಸ್ತುತಪಡಿಸಬೇಕು.

ಇದರ ಕುರಿತಾಗಿ ಇನ್ನಷ್ಟು ತಿಳಿದುಕೊಳ್ಳಲು ಶಾಲೆ/ಶಿಕ್ಷಕರು ಸರ್ಕಾರಿ ಕಚೇರಿಗೆ ಭೇಟಿಯನ್ನು ಆಯೋಜಿಸಬಹುದು, ಮತ್ತು ಪ್ರತಿ ಗುಂಪಿನಿಂದ ಕೆಲವು ಆಯ್ದ ಸದಸ್ಯರು ಪ್ರತ್ಯಕ್ಷ ಅನುಭವವನ್ನು ಪಡೆಯಲು ಶಿಕ್ಷಕರೊಂದಿಗೆ ಹೋಗಬಹುದು. (ಐಚ್ಛಿಕ)

ಗಮನಿಸಿ: ಚಟುವಟಿಕೆಯ ದಿನದಂದು ಪೂರ್ಣಗೊಳಿಸಿದ ಹೋಮ್‌ವರ್ಕ್ ಅನ್ನು ತರುವ ಸಲುವಾಗಿ ಮುಂದಿನ ತರಗತಿಯ ದಿನಾಂಕವನ್ನು ವಿದ್ಯಾರ್ಥಿಗಳಿಗೆ ಮೊದಲೇ ತಿಳಿಸಿ.

ತರಗತಿ 2: 45 ನಿಮಿಷಗಳ ತರಗತಿಯ ಹಂತ 3-4

**ಪುನರ್ಮನನ: (5 ನಿಮಿಷ)**

ಹೋಮ್‌ವರ್ಕ್‌ನ ಕುರಿತಾಗಿ ತಮ್ಮ ಅನುಭವವನ್ನು ಹಂಚಿಕೊಳ್ಳಲು ವಿದ್ಯಾರ್ಥಿಗಳಿಗೆ ಅನುವು ಮಾಡಿಕೊಡುವುದರ ಮೂಲಕ ಶಿಕ್ಷಕರು ತರಗತಿಯನ್ನು ಪ್ರಾರಂಭಿಸಬಹುದು.

**ಹಂತ 3: ಗುಂಪು ಪ್ರಸ್ತುತಿ**

ಈ ತರಗತಿಗೆ ಬೇಕಾದ ಅಂದಾಜು ಸಮಯ: 30 ನಿಮಿಷಗಳು.

1. ತಮ್ಮ ಅನುಭವವನ್ನು ಹಂಚಿಕೊಳ್ಳಲು ಶಿಕ್ಷಕರು ಗುಂಪುಗಳನ್ನು ಒಂದೊಂದಾಗಿ ತರಗತಿಗೆ ಕರೆಯುತ್ತಾರೆ. ಶಿಕ್ಷಕರು ಮೊದಲು ಎರಡೂ ಗ್ರಾಮೀಣ ಗುಂಪುಗಳನ್ನು ಆಹ್ವಾನಿಸಿ ಮತ್ತು ನಂತರ ನಗರ ಪ್ರದೇಶದ ಗುಂಪನ್ನು ಕರೆಯಬಹುದು. (ಇದನ್ನು ಅದಲು ಬದಲು ಕೂಡಾ ಮಾಡಬಹುದು - ಇದು ಶಿಕ್ಷಕರ ಆಯ್ಕೆಯಾಗಿದೆ)
2. ಪ್ರಸ್ತುತಪಡಿಸಲು ಪ್ರತಿ ಗುಂಪು 4-5 ನಿಮಿಷಗಳು ಇರುತ್ತವೆ ಎಂದು ವಿದ್ಯಾರ್ಥಿಗಳಿಗೆ ತಿಳಿಸಿ.
3. ಪ್ರತಿ ಗುಂಪು ಸಹ ತಾವು ತಿಳಿದುಕೊಂಡ ಉತ್ತರಗಳನ್ನು ನೋಟೀಸ್ ಬೋರ್ಡ್‌ನಲ್ಲಿ ಪ್ರದರ್ಶಿಸಬಹುದು. ಆಗ ಪ್ರತಿಯೊಬ್ಬರೂ ಅದನ್ನು ನೋಡಬಹುದು.

**ಹಂತ 4: ಚಟುವಟಿಕೆಯ ವಿವರಣೆ**

ಬೇಕಾದ ಅಂದಾಜು ಸಮಯ: 10 ನಿಮಿಷಗಳು

ಚಟುವಟಿಕೆಗಳನ್ನು ವಿವರಿಸಲು ವಿದ್ಯಾರ್ಥಿಗಳಿಗೆ ಈ ಕೆಳಗಿನ ಪ್ರಶ್ನೆಗಳನ್ನು ಕೇಳಿ - ಅಂದರೆ ವಿದ್ಯಾರ್ಥಿಗಳು ಈ ಕೆಳಗಿನ ವಿಷಯಗಳನ್ನು ಹಂಚಿಕೊಳ್ಳಬಹುದು.

1. ಈ ಚಟುವಟಿಕೆಯಿಂದ ನೀವು ಏನನ್ನು ಕಲಿತಿದ್ದೀರಿ?
2. ಈ ಚಟುವಟಿಕೆಯಲ್ಲಿ ನಿಮಗೆ ಹೆಚ್ಚು ಖುಷಿಕೊಟ್ಟಿದ್ದು ಏನು?
3. ಯಾವುದೇ ಸ್ಥಳೀಯ ಸಮಸ್ಯೆಯನ್ನು ಪರಿಹರಿಸಲು ಅಸ್ತಿತ್ವದಲ್ಲಿರುವ ರಚನೆಯಲ್ಲಿ ಸರ್ಕಾರವು ಯಾವ ಪಾತ್ರವನ್ನು ವಹಿಸುತ್ತದೆ?

**ರಿಫ್ಲೆಕ್ಷನ್ ಶೀಟ್‌ಗಳು ಮತ್ತು ಪ್ರತಿಕ್ರಿಯೆ ಫಾರ್ಮ್‌ಗಳು**

ಪ್ರತಿಕ್ರಿಯೆ ಫಾರ್ಮ್‌ಗಳನ್ನು ದಯವಿಟ್ಟು ಶಿಕ್ಷಕರು ಭರ್ತಿ ಮಾಡಿ ಮತ್ತು ರಿಫ್ಲೆಕ್ಷನ್ ಶೀಟ್‌ಗಳನ್ನು ಭರ್ತಿ ಮಾಡಲು ವಿದ್ಯಾರ್ಥಿಗಳಿಗೆ ಹೇಳಿ.

ACTiZEN An initiative by DESH APNAYEN | DESH APNAYEN

## ಪ್ರತಿಕ್ರಿಯೆ ಫಾರ್ಮ್ (ಶಿಕ್ಷಕರು ಭರ್ತಿ ಮಾಡಬೇಕು)

ಚಟುವಟಿಕೆ ಹೆಸರು:

ಶಾಲೆಯ ಹೆಸರು:

ವಿದ್ಯಾರ್ಥಿಗಳ ಗ್ರೇಡ್/ತರಗತಿ:

ಭಾಗವಹಿಸಿದ ವಿದ್ಯಾರ್ಥಿಗಳ ಸಂಖ್ಯೆ:

| ಕ್ರ.ಸಂ. | ರಿಮಾರ್ಕ್ | ಖಂಡಿತವಾಗಿ ಒಪ್ಪುತ್ತೇನೆ | ಒಪ್ಪುತ್ತೇನೆ | ಒಪ್ಪುವುದಿಲ್ಲ |
|---|---|---|---|---|
| 1 | ಈ ಚಟುವಟಿಕೆಯು ವಿದ್ಯಾರ್ಥಿಗಳಲ್ಲಿ ಪ್ರಾಯೋಗಿಕ ಜ್ಞಾನವನ್ನು ಅಭಿವೃದ್ಧಿಪಡಿಸಲು ಸಹಾಯಕವಾಗಿದೆ. | | | |
| 2 | ಈ ಚಟುವಟಿಕೆಯಲ್ಲಿ ವಿಷಯವು ಅರ್ಥಮಾಡಿಕೊಳ್ಳಲು ಸುಲಭವಾಗಿತ್ತು | | | |
| 3 | ಈ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳು ಖುಷಿಯಿಂದ ತೊಡಗಿಸಿಕೊಂಡರು | | | |
| 4 | ಈ ಚಟುವಟಿಕೆಯು ಕಲಿಕೆಯ ಫಲಿತಾಂಶವನ್ನು ಸಾಧಿಸಿದೆ | | | |
| 5. | ಒಟ್ಟಾರೆಯಾಗಿ ಕ್ಲಬ್ ಚಟುವಟಿಕೆಗಳು ನಮ್ಮ ವಿದ್ಯಾರ್ಥಿಗಳನ್ನು ಜಾಗೃತ, ಮಾಹಿತಿಯುಕ್ತ ಮತ್ತು ಜವಾಬ್ದಾರಿಯುತ ನಾಗರಿಕರಾಗಲು ಸರಿಯಾದ ಮಾರ್ಗವನ್ನು ತೋರಿಸುತ್ತದೆ | | | |
| 6. | ನೀಡಲಾದ ನಿರ್ದಿಷ್ಟ ಸಮಯದಲ್ಲಿ ಚಟುವಟಿಕೆಯನ್ನು ಪೂರ್ಣಗೊಳಿಸಬಹುದು. (ಕೆಳಗೆ ನೀಡಲಾದ ಸ್ಥಳದಲ್ಲಿ ಹೆಚ್ಚುವರಿ ಪ್ರಯತ್ನಗಳನ್ನು ತೆಗೆದುಕೊಂಡಿದ್ದರ ಬಗ್ಗೆ ಉಲ್ಲೇಖಿಸದಿದ್ದರೆ) | | | |

---

ನೀವು ಚಟುವಟಿಕೆಯನ್ನು ಹೇಗೆ ರೇಟ್ ಮಾಡುತ್ತೀರಿ?

| ಅತ್ಯುತ್ತಮ | ತುಂಬಾ ಒಳ್ಳೆಯದು | ಒಳ್ಳೆಯದು | ತೃಪ್ತಿಕರ | ಸುಧಾರಣೆ ಅಗತ್ಯವಿದೆ |
|---|---|---|---|---|
| | | | | |

ನಮ್ಮ ಕುರಿತು ರಿಮಾರ್ಕ್‌ಗಳು/ಸಲಹೆಗಳು:

______________________________________________________________________________

______________________________________________________________________________

ಚಟುವಟಿಕೆಯ ಫೋಟೋ/ವೀಡಿಯೋಗಳನ್ನು ಇಲ್ಲಿ ಅಪ್‌ಲೋಡ್ ಮಾಡಿ:

**ರಿಫ್ಲೆಕ್ಷನ್ ಶೀಟ್** (ವಿದ್ಯಾರ್ಥಿಗಳು ಭರ್ತಿ ಮಾಡಬೇಕು)

ಹೆಸರು:

ಗ್ರೇಡ್:

ವಿಭಾಗ:

ಶಾಲೆಯ ಹೆಸರು:

ನಗರ:

Q.1 ನಿಮ್ಮ ಪ್ರದೇಶದ ಗ್ರಾಮ ಪಂಚಾಯತಿ ಅಧ್ಯಕ್ಷರು ಅಥವಾ ಮೇಯರ್ ಹೆಸರನ್ನು ಬರೆಯಿರಿ?

Q.2 ಸ್ಥಳೀಯ ಆಡಳಿತವು ಪರಿಹರಿಸಬೇಕಾಗಿರುವ ನಿಮ್ಮ ಪ್ರದೇಶದ ಜನರ ಒಂದು ಸಮಸ್ಯೆಯನ್ನು ಬರೆಯಿರಿ.

Q. 3 ನೀವು ಯಾವ ಗ್ರಾಮ ಪಂಚಾಯತಿ ಅಥವಾ ನಗರಸಭೆಗೆ ಸೇರಿದ್ದೀರಿ?

Q.4 ಗ್ರಾಮೀಣ ಪ್ರದೇಶದಲ್ಲಿರುವ ಸ್ಥಳೀಯ ಆಡಳಿತ __________

**a) ಗ್ರಾಮ ಪಂಚಾಯತಿ**

b) ಗ್ರಾಮದ ಶಾಲೆ

c) ನಗರಸಭೆ

d) ಇವುಗಳಲ್ಲಿ ಯಾವುದೂ ಇಲ್ಲ

Q.5 ನಗರಸಭೆ /ಪಂಚಾಯತಿನ ಅಧಿಕಾರಾವಧಿಯು _______________ ವರ್ಷಗಳು.

a) ಮೂರು

**b)** ಐದು

c) ಜೀವಿತಾವಧಿ

d) ಇವುಗಳಲ್ಲಿ ಯಾವುದೂ ಇಲ್ಲ

6. ನೀವು ಈ ಚಟುವಟಿಕೆಯಿಂದ ಏನನ್ನು ಕಲಿತಿದ್ದೀರಿ? (ಯಾವುದೇ ಮೂರು ಪಾಯಿಂಟ್‌ಗಳು)

______________________________________________________________________________

____________________________________________________________

7. ನೀವು ಈ ಚಟುವಟಿಕೆಯನ್ನು ಖುಷಿ ಪಟ್ಟಿರಾ? ನೀವಿದನ್ನು ಹೇಗೆ ರೇಟ್ ಮಾಡುತ್ತೀರಿ?

ಬಹಳ ಆಸಕ್ತಿಕರ/ಆಸಕ್ತಿಕರ/ಆಸಕ್ತಿಕರವಾಗಿಲ್ಲ

---

ಚಟುವಟಿಕೆಗೆ ಸಂಬಂಧಿಸಿದಂತೆ ದೇಶ್ ಅಪ್ನಾಯೇ ತಂಡಕ್ಕೆ ದಯವಿಟ್ಟು ನಿಮ್ಮ ಪ್ರತಿಕ್ರಿಯೆ/ಸಲಹೆಯನ್ನು ತಿಳಿಸಿ. ಸಂಬಂಧಿತ ಚಿತ್ರಗಳು ಮತ್ತು ವೀಡಿಯೋಗಳನ್ನು ಅಪ್‌ಲೋಡ್ ಮಾಡಿ.

---

ಪ್ರಿಂಟ್ ವಿಭಾಗ -

**ಅನುಬಂಧ 1 – ಸಮಸ್ಯೆ ಕಾರ್ಡ್‌ಗಳು**

| ಸಮಸ್ಯೆ ಕಾರ್ಡ್ |
|---|
| **ಸಮಸ್ಯೆ: ಕಳೆದ ಒಂದು ತಿಂಗಳಿನಿಂದ ನಿಮ್ಮ ಪ್ರದೇಶದಲ್ಲಿ ತುಂಬಾ ಕಡಿಮೆ ನೀರಿನ ಪೂರೈಕೆಯಾಗುತ್ತಿದ್ದು, ಇದು ನಿಮಗೆ ಮತ್ತು ನಿಮ್ಮ ಕುಟುಂಬಕ್ಕೆ ಅಡುಗೆ, ಸ್ವಚ್ಛತೆ, ಸ್ನಾನ, ಹಾಗು ಮೂಲಭೂತ ಕಾರ್ಯಗಳಿಗೆ ಕಷ್ಟಕರವಾಗಿದೆ. ನೀರಿನ ಕೊರತೆಯಿಂದಾಗಿ ಶಾಲೆಗೆ ತಲುಪುವುದು ಕೂಡಾ ವಿಳಂಬವಾಗುತ್ತಿದೆ.** |

**ಅನುಬಂಧ 2 – ಪರಾಮರ್ಶನಾ ಕರಪತ್ರ**

**ನಗರ ಪ್ರದೇಶಗಳ ಕುರಿತು ಕಾರ್ಯನಿರ್ವಹಿಸುತ್ತಿರುವ ತಂಡಕ್ಕೆ – ಪಂಚಾಯತಿ ಕರಪತ್ರವನ್ನು ಹಂಚಿ**

**ಗ್ರಾಮೀಣ ಪ್ರದೇಶಗಳ ಕುರಿತು ಕಾರ್ಯನಿರ್ವಹಿಸುತ್ತಿರುವ ತಂಡಕ್ಕೆ– ನಗರಸಭೆ ಕರಪತ್ರವನ್ನು ಹಂಚಿ**

# ನಗರಸಭೆ

ರಚನೆ:

**ನಗರ ಪಾಲಿಕೆ**
- 100,000 ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ದೊಡ್ಡ ನಗರಗಳು
- ಇದರ ಮುಖ್ಯಸ್ಥರನ್ನು ಮೇಯರ್ ಎಂದು ಕರೆಯಲಾಗುತ್ತದೆ

**ನಗರ ಸಭೆ**
- 25000 ದಿಂದ 100000 ನಡುವಿನ ಜನಸಂಖ್ಯೆ ಹೊಂದಿರುವ ಸಣ್ಣ ನಗರಗಳು
- ಇದರ ಮುಖ್ಯಸ್ಥರನ್ನು ಚೇರ್‌ಮನ್/ಅಧ್ಯಕ್ಷ ಎಂದು ಕರೆಯಲಾಗುತ್ತದೆ

**ನಗರ ಪಂಚಾಯತ್**
- 11000 ದಿಂದ 25000 ನಡುವಿನ ಜನಸಂಖ್ಯೆ ಹೊಂದಿರುವ ನಗರದಿಂದ ಗ್ರಾಮೀಣ ಪ್ರದೇಶ
- ಚೇರ್‌ಮನ್ ಮುಖ್ಯಸ್ಥರಾಗಿರುತ್ತಾರೆ. ಆದರೆ ಕಾರ್ಯನಿರ್ವಾಹಕ ಅಧಿಕಾರಿಯು ನಗರ ಪಂಚಾಯತ್‌ನ ಪ್ರಭಾರ ಅಧಿಕಾರಿಯಾಗಿರುತ್ತಾರೆ

**ನಗರಾಭಿವೃದ್ಧಿಯಲ್ಲಿ ನಗರಸಭೆಯ ಪಾತ್ರ –**

- ರಸ್ತೆಗಳು, ಸೇತುವೆಗಳು ಹಾಗೂ ಒಳಚರಂಡಿ ವ್ಯವಸ್ಥೆಗಳ ನಿರ್ಮಾಣ ಮತ್ತು ನಿರ್ವಹಣೆ.
- ನೀರಿನ ಪೂರೈಕೆಯ ನಿರ್ವಹಣೆ.
- ಸಾರ್ವಜನಿಕ ಆರೋಗ್ಯ ಮತ್ತು ಸರಿಯಾದ ನೈರ್ಮಲ್ಯವನ್ನು ಖಚಿತಪಡಿಸಿಕೊಳ್ಳುವುದು.
- ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸುವುದು ಮತ್ತು ಅವುಗಳ ಬಳಕೆಯನ್ನು ನಿಯಂತ್ರಿಸುವುದು.

- ಆಯಾ ಪ್ರದೇಶಗಳಲ್ಲಿ ಶಾಲೆಗಳ ನಿರ್ಮಾಣ.
- ಜನನ ಮತ್ತು ಮರಣ ದಾಖಲೆಗಳನ್ನು ನಿರ್ವಹಿಸುವುದು.

ನಗರಸಭೆಯು ನೀರು ಪೂರೈಕೆ ಯೋಜನೆಯನ್ನು ಹೊಂದಿರುವ/ನಿರ್ವಹಿಸುವ ಕಾರಣದಿಂದಾಗಿ ಅದು ಸಮುದಾಯಕ್ಕೆ ನೀರು ಪೂರೈಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಅದು ಈ ಕೆಳಗಿನ ಕಾರ್ಯಗಳಿಗೆ ಜವಾಬ್ದಾರಿಯಾಗಿದೆ:

- ತನ್ನ ಅಡಿಯಲ್ಲಿ ಬರುವ ಪ್ರದೇಶಗಳಿಗೆ ಸಾಕಷ್ಟು ನೀರು ಪೂರೈಕೆ ಹಾಗೂ ಶುದ್ಧ ಮತ್ತು ಸುರಕ್ಷಿತ ಕುಡಿಯುವ ನೀರು ಲಭ್ಯವಾಗವಂತೆ ಯೋಜನೆಯನ್ನು ರೂಪಿಸುವುದು.
- ಇದಕ್ಕಾಗಿಯೇ ಪ್ರತ್ಯೇಕ ಬಜೆಟ್ ರೂಪಿಸುವುದು.
- ಶುಲ್ಕಗಳು ಮತ್ತು ಚಾರ್ಜ್‌ಗಳನ್ನು ಅನುಮೋದಿಸುವುದು.
- ನಿರ್ವಾಹಕರು ಮತ್ತು ಗುತ್ತಿಗೆದಾರರಿಗೆ ಅನುಮೋದನೆ ನೀಡುವುದು.
- ಅನಪೇಕ್ಷಿತ ಕೊರತೆ ಮತ್ತು ವಿಪತ್ತುಗಳಿಗೆ ಪರ್ಯಾಯ ಯೋಜನೆಗಳನ್ನು ರಚಿಸುವುದು.
- ಇತರ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸುವುದು.
- ನಿಯಮಿತ ಸೋರಿಕೆಯ ನಿರ್ವಹಣೆಗಾಗಿ ತರಬೇತಿ ಪಡೆದ ಮೆಕ್ಯಾನಿಕ್‌ಗಳು ಹಾಗು ಪೈಪ್ ಮೂಲಕ ನೀರು ಪೂರೈಸಲು ತರಬೇತಿ ಪಡೆದ ನಿರ್ವಾಹಕರನ್ನು ನೇಮಿಸಿಕೊಳ್ಳುವುದು.

ವೈಶಿಷ್ಟ್ಯಗಳು:

- ವಿವಿಧ ರೀತಿಯ ಸಮಸ್ಯೆಗಳನ್ನು ಪರಿಹರಿಸಲು ಅನೇಕ ಇಲಾಖೆಗಳನ್ನು ಸ್ಥಾಪಿಲಾಗಿದೆ. ಉದಾಹರಣೆಗೆ, ನೀರು, ರಸ್ತೆ ಸುರಕ್ಷತೆ ಇತ್ಯಾದಿಗಳ ಅನೇಕ ಸಮಸ್ಯೆಗಳನ್ನು ಪರಿಹರಿಸಲು ಲೋಕೋಪಯೋಗಿ ಇಲಾಖೆಯನ್ನು ಸ್ಥಾಪಿಸಲಾಗಿದೆ, ಮತ್ತು ಮಾಲಿನ್ಯ ಮಂಡಳಿಯ ವಿವಿಧ ರೀತಿಯ ಮಾಲಿನ್ಯ, ತ್ಯಾಜ್ಯ ನಿರ್ವಹಣೆ ಇತ್ಯಾದಿ ಸಮಸ್ಯೆಗಳ ಕುರಿತು ನೋಡಿಕೊಳ್ಳುತ್ತದೆ.
- ಇದು ಎಲ್ಲರಿಗೂ ಶುದ್ಧ ನೀರು, ಸರಿಯಾದ ನೈರ್ಮಲ್ಯ ಮತ್ತು ಮೂಲ ಸೌಕರ್ಯಗಳನ್ನು ಒದಗಿಸುವ ಮೂಲಕ ನಗರಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ.
- ಅಭಿವೃದ್ಧಿ ಮತ್ತು ಸ್ಥಳೀಯ ಆಡಳಿತಕ್ಕಾಗಿ ಬಜೆಟ್ ಮತ್ತು ಹಣವನ್ನು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ಇದು ಯೋಜಿಸುತ್ತದೆ.
- ಪ್ರತಿನಿಧಿಗಳು ನಿವಾಸಿಗಳೊಂದಿಗೆ ನೇರ ಸಂಪರ್ಕದಲ್ಲಿರುವುದರಿಂದ ಅವರು ಹೇಗೆ ಸ್ಪಂದಿಸುತ್ತಾರೆ ಎಂಬುದನ್ನು ಇದು ತಿಳಿಸುತ್ತದೆ.

ಸ್ಥಳೀಯ ನಗರಸಭೆಯನ್ನು ನೀವು ಸಂಪರ್ಕಿಸುವುದು ಹೇಗೆ?

- ಸ್ಥಳೀಯ ನಗರಸಭೆ/ವಾರ್ಡ್ ಕಚೇರಿಗೆ ಭೇಟಿ ನೀಡಿ ಮತ್ತು ಸಮಸ್ಯೆಗಳನ್ನು ವೈಯಕ್ತಿಕವಾಗಿ/ತಂಡದಲ್ಲಿ ಚರ್ಚಿಸಿ.
- ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ಬರೆಯಿರಿ.
- ಯಾವುದೇ ಸಮಸ್ಯೆಗೆ ಸಂಬಂಧಿಸಿದಂತೆ ನೋಂದಾಯಿಸಲು ವೆಬ್‌ಸೈಟ್‌ನಲ್ಲಿ ಆನ್‌ಲೈನ್ ದೂರನ್ನು ದಾಖಲಿಸಿ.
- ಸಮಸ್ಯೆಗಳ ಕುರಿತು ತಿಳಿದುಕೊಳ್ಳಲು ಅರ್ಜಿ ಸಲ್ಲಿಸಿ ಮತ್ತು ಆರ್‌ಟಿಐ ಅನ್ನು ಬಳಸಿ.


ದಿ ಕರ್ನಾಟಕ ಆನ್‌ಲೈನ್ ಎಂಬುದು ಎಲ್ಲಾ ಸರ್ಕಾರಿ ಸೇವೆಗಳನ್ನು ತಮ್ಮ ನೆರೆಹೊರೆಯಲ್ಲಿ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡುವ ಒಂದು ಉಪಕ್ರಮವಾಗಿದೆ. ನೀವು ಸಂಬಂಧಿತ ಇಲಾಖೆಯ ವೆಬ್‌ಸೈಟ್‌ಗೆ ಭೇಟಿ ನೀಡಬಹುದು ಮತ್ತು ನಿಮ್ಮ ಕುಂದುಕೊರತೆಗಳನ್ನು ನಿವಾರಿಸಿಕೊಳ್ಳಬಹುದು: http://www.mrc.gov.in/en/CitizenOnlineServices

ಪರಾಮರ್ಶೆಗಾಗಿ ಆನ್‌ಲೈನ್ ವೆಬ್‌ಸೈಟ್‌ಗಳು.

ನೀವು ವಾಸಿಸುವ ನಗರಗಳಲ್ಲಿ ಅನೇಕ ನಗರ ಪಾಲಿಕೆಗಳಿದ್ದು, ನಾಗರಿಕರು ದೂರುಗಳನ್ನು ಸಲ್ಲಿಸಬಹುದಾದ ಪೋರ್ಟಲ್‌ಗಳನ್ನು ಕಂಡುಕೊಳ್ಳಲು ಪ್ರಯತ್ನಿಸಿ.

# ಪಂಚಾಯತ್

ರಚನೆ:




**ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್‌ನ ಪಾತ್ರ –**

- ಸಣ್ಣ ಕಳ್ಳತನಗಳು ಮತ್ತು ಹಣದ ವಿವಾದಗಳಂತಹ ಸಣ್ಣ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳ ವಿಚಾರಣೆಯಂತಹ ನ್ಯಾಯಾಂಗ ಕಾರ್ಯಗಳನ್ನು ಪ್ರತ್ಯೇಕ ನ್ಯಾಯ ಪಂಚಾಯತ್ ಅಥವಾ ಗ್ರಾಮ ಪಂಚಾಯತ್‌ಗಳು ನಿರ್ವಹಿಸುತ್ತವೆ.
- ಜನರ ಜೀವನ ಸ್ಥಿತಿಗಳನ್ನು ಸುಧಾರಿಸಲು ನೈರ್ಮಲ್ಯ ಮತ್ತು ವೈದ್ಯಕೀಯ ನೆರವು, ಶಾಲೆಗಳು, ನೀರಾವರಿ, ರಸ್ತೆಗಳು, ಕುಡಿಯುವ ನೀರು ಹಾಗೂ ಮುಂತಾದ ಅಗತ್ಯ ಸೌಲಭ್ಯಗಳನ್ನು ಪೂರೈಸುವುದು.
- ಗ್ರಾಮೀಣ ಕೈಗಾರಿಕೆಗಳು, ಆರೋಗ್ಯ, ಶಿಕ್ಷಣ, ಮಹಿಳೆಯರು ಹಾಗೂ ಮಕ್ಕಳ ಕಲ್ಯಾಣ ಇತ್ಯಾದಿಗಳ ಪ್ರಚಾರದ ಮೂಲಕ ಸಾಮಾಜಿಕ-ಆರ್ಥಿಕ ಕಲ್ಯಾಣಗಳ ಸುಧಾರಣೆ.

**ಗ್ರಾಮ ಪಂಚಾಯತ್ (ಜಿಪಿ): ಜಿಪಿಯು ಸಮುದಾಯದ ಜನರಿಗೆ ನೀರು ಪೂರೈಕೆ ಯೋಜನೆಯನ್ನು ಹೊಂದಿರುತ್ತಾರೆ/ನಿರ್ವಹಿಸುತ್ತಾರೆ ಮತ್ತು ಅದಕ್ಕೆ ಜವಾಬ್ದಾರರಾಗಿರುತ್ತಾರೆ:**

- ಅಗತ್ಯವಿರುವ ನೀರಿನ ಪ್ರಮಾಣದ ಅಂದಾಜು
- ಆಯಾ ಪ್ರದೇಶದಲ್ಲಿರುವ ನೀರಿನ ಮೂಲಗಳ ಪಟ್ಟಿ - ನೀರಿನ ಲಭ್ಯತೆಯ ಕುರಿತು ಆಡಿಟ್ ನಡೆಸುವುದು
- ನೀರು ಪೂರೈಕೆ ಯೋಜನೆಯ ಪ್ರಕಾರ ಲಭ್ಯತೆ ಮತ್ತು ತೀರ್ಮಾನ.
- ಗ್ರಾಮ ಸಭೆಯಲ್ಲಿ ಚರ್ಚಿಸಿದ ನಂತರ ವಾರ್ಷಿಕ ಬಜೆಟ್ ಮತ್ತು ಬಳಕೆದಾರರ ಶುಲ್ಕಗಳನ್ನು ಅನುಮೋದಿಸುವುದು.
- ಆಪರೇಟರ್‌ಗಳನ್ನು ಅನುಮೋದಿಸುವುದು

- ಇತರ ಅಧಿಕಾರಿಗಳೊಂದಿಗೆ ಸಮನ್ವಯ ಸಾಧನೆ
- ಕೈ ಪಂಪ್‌ಗಳಿಗೆ ಪೈಪ್ ಮೂಲಕ ನೀರು ಪೂರೈಸಲು ನಿಯಮಿತ ನಿರ್ವಹಣೆಗಾಗಿ ತರಬೇತಿ ಪಡೆದ ಮೆಕ್ಯಾನಿಕ್‌ಗಳು ಮತ್ತು ಆಪರೇಟರ್‌ಗಳನ್ನು ನೇಮಿಸಿಕೊಳ್ಳುವುದು.

ಕೆಲವು ಸ್ಥಳಗಳಲ್ಲಿ-

ನೀರು ಸಮಿತಿ/ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿ(ವಿಡಬ್ಲ್ಯೂಎಸ್‌ಸಿ): ಈ ವಿಡಬ್ಲ್ಯೂಎಸ್‌ಸಿ ಯು ಜಿಪಿಯ ಸ್ಥಾಯಿ ಸಮಿತಿಯಾಗಿದ್ದು, ಇದು ಗ್ರಾಮದ ಕುಡಿಯುವ ನೀರಿನ ಭದ್ರತೆಯ ಯೋಜನೆ, ಅನುಷ್ಠಾನ ಕಾರ್ಯಾಚರಣೆ ಹಾಗೂ ನಿರ್ವಹಣೆ ಹಾಗೂ ಜವಾಬ್ದಾರಿಯನ್ನು ಹೊಂದಿದೆ.

- ಪ್ರತಿ ಮನೆಯ ವಂತಿಗೆ ಮತ್ತು ಬಳಕೆದಾರರ ಶುಲ್ಕಗಳನ್ನು ಸಂಗ್ರಹಿಸುವುದು.
- ಬ್ಯಾಂಕ್ ಖಾತೆಯನ್ನು ತೆರೆಯುವುದು ಮತ್ತು ನಿರ್ವಹಿಸುವುದು.
- ಬಳಕೆದಾರರ ಶುಲ್ಕಗಳಿಗಾಗಿ ವಾರ್ಷಿಕ ಬಜೆಟ್ ಮತ್ತು ಶಿಫಾರಸುಗಳನ್ನು ತಯಾರಿಸುವುದು.
- ನೀರನ್ನು ವ್ಯರ್ಥಮಾಡದಂತೆ ಮತ್ತು ನೀರಿನ ಸ್ವಚ್ಛತೆಯನ್ನು ಕಾಪಾಡುವಂತೆ ಜನರನ್ನು ಜಾಗರೂಕರನ್ನಾಗಿಸುವುದು.
- ಕೈಪಂಪಿನ ಆಪರೇಟರ್‌ಗಳು ಮತ್ತು ಪೈಪ್ ಮೂಲಕ ನೀರು ಪೂರೈಕೆ ಮಾಡುವ ಆಪರೇಟರ್‌ಗಳಿಗೆ ವೃತ್ತಿಪರ ಬೆಂಬಲವನ್ನು ಒದಗಿಸುವುದು

ವೈಶಿಷ್ಟ್ಯಗಳು:

- ಆಯಾ ಪ್ರದೇಶಗಳಿಗೆ ವಾರ್ಷಿಕ ಅಭಿವೃದ್ಧಿ ಯೋಜನೆಗಳನ್ನು ಮಾಡುವುದು ಮತ್ತು ಹೆಚ್ಚು ವೈಜ್ಞಾನಿಕ ಕೃಷಿ, ಉದ್ಯೋಗ ಸೃಷ್ಟಿ ಇತ್ಯಾದಿಗಳಿಗೆ ಯೋಜನೆಗಳನ್ನು ಸಿದ್ಧಪಡಿಸುವುದು.
- ಹೆಚ್ಚಿನ ನಿರ್ಧಾರಗಳನ್ನು ಗ್ರಾಮ ಪಂಚಾಯತಿ ಸಭೆಗಳಲ್ಲಿ ತೆಗೆದುಕೊಳ್ಳಲಾಗುತ್ತದೆ.
- ಸಾರ್ವಜನಿಕ ವಿತರಣಾ ವ್ಯವಸ್ಥೆಯಂತಹ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪ್ರಾರಂಭಿಸಿದ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಮತ್ತು ಸಮನ್ವಯಗೊಳಿಸುವುದು.
- ಸಾರ್ವಜನಿಕ ವಿಚಾರಣೆ ಅಥವಾ ಜನ್ ಸುನ್‌ವಾಯ್ ಎಂಬ ಅವಧಿಯನ್ನು ಇದು ಹೊಂದಿದ್ದು, ಇಲ್ಲಿ ಚುನಾಯಿತ ಸದಸ್ಯರು ಜನರ ಸಮಸ್ಯೆಗಳನ್ನು ಆಲಿಸುತ್ತಾರೆ.
- ಇದು ಸ್ಥಳೀಯ ಪರಿಸ್ಥಿತಿಗಳ ಕುರಿತು ತಿಳಿದಿರುವುದರಿಂದ ಮತ್ತು ಅದಕ್ಕೆ ತಕ್ಕಂತೆ ಸ್ಪಂದಿಸುವ ಕ್ರಮಗಳನ್ನು ತೆಗೆದುಕೊಳ್ಳುವುದರಿಂದ ಜನರ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ಪ್ರಮುಖ ಪಾತ್ರವಹಿಸುತ್ತದೆ.
- ಅಭಿವೃದ್ಧಿ ಮತ್ತು ಸ್ಥಳೀಯ ಆಡಳಿತಕ್ಕಾಗಿ ಬಜೆಟ್ ಹಾಗೂ ಹಣವನ್ನು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ಇದು ಯೋಜಿಸುತ್ತದೆ.
- ಕೆಲವೊಮ್ಮೆ ಇದು ಗ್ರಾಮದ ಜಾತ್ರೆಯನ್ನು ಸಹ ನಡೆಸುತ್ತದೆ ಮಾತ್ರವಲ್ಲದೆ ಆದಾಯವನ್ನು ಸಹ ನೀಡುತ್ತದೆ.

ನೀವು ಸ್ಥಳೀಯ ಪಂಚಾಯತಿ ಅನ್ನು ಸಂಪರ್ಕಿಸುವುದು ಹೇಗೆ?

- ಸ್ಥಳೀಯ ಪಂಚಾಯತಿ ಭೇಟಿ ನೀಡಿ ಮತ್ತು ವೈಯಕ್ತಿಕವಾಗಿ/ಗುಂಪಾಗಿ ಸಮಸ್ಯೆಗಳನ್ನು ಚರ್ಚಿಸಿ.
- ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ಬರೆಯಿರಿ.
- ನಿಮ್ಮ ರಾಜ್ಯವು ಯಾವುದೇ ಸಮಸ್ಯೆಯನ್ನು ಹೊಂದಿದ್ದರೆ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ದೂರನ್ನು ನೋಂದಾಯಿಸಿ.
- ನಿಮ್ಮ ಪ್ರದೇಶದ ಪಂಚಾಯತಿ ಸದಸ್ಯರನ್ನು ನೀವು ಭೇಟಿ ಮಾಡಬಹುದು.
- ಸಮಸ್ಯೆಗಳ ಕುರಿತು ತಿಳಿದುಕೊಳ್ಳಲು ಅರ್ಜಿ ಸಲ್ಲಿಸಿ ಮತ್ತು ಆರ್‌ಟಿಐ ಅನ್ನು ಬಳಸಿ

ನೀವು ಸಂಬಂಧಿತ ಇಲಾಖೆಯ ವೆಬ್‌ಸೈಟ್‌ಗೆ ಭೇಟಿ ನೀಡಬಹುದು ಮತ್ತು ನಿಮ್ಮ ಕುಂದುಕೊರತೆಗಳನ್ನು ನಿವಾರಿಸಿಕೊಳ್ಳಬಹುದು:

ಕರ್ನಾಟಕ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್- https://rdpr.karnataka.gov.in/english

"ಬಾಪೂಜಿ ಸೇವಾ ಕೇಂದ್ರ ಎಂಬುದು ಕರ್ನಾಟಕದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಗ್ರಾಮೀಣ ನಾಗರಿಕರು ತಮ್ಮ ಅನುಕೂಲಕ್ಕಾಗಿ ವಿವಿಧ ಉಪಯುಕ್ತ ಸೇವೆಗಳನ್ನು ಪಡೆಯಲು ಸಹಾಯ ಮಾಡುವ ವಿಶಿಷ್ಟ ಉಪಕ್ರಮವಾಗಿದೆ."

ಪರಾಮರ್ಶೆಗಾಗಿ ಆನ್‌ಲೈನ್ ವೆಬ್‌ಸೈಟ್‌ಗಳು.- https://bsk.karnataka.gov.in/BSK/csLogin/loginPage